ಪ್ರಜಾವಾಣಿ

Saturday, July 24th, 2010

# ಟೆನ್‌ಪಿನ್ ಬೌಲಿಂಗ್: ಭೀಮ್ ಮಂಡಲ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೆಐಆರ್‌ಎಸ್ (ಜೈನ್ ಅಂತರರಾಷ್ಟ್ರೀಯ ವಸತಿ ಶಾಲೆ)ಯ ಭೀಮ್ ಮಂಡಲ್ ಅವರು ಇಲ್ಲಿ ನಡೆದ 'ಕೆಎಸ್‌ಟಿಬಿಎ-ಸ್ಟಾರ್‌ಸಿಟಿ' ರಾಜ್ಯ ರ‍್ಯಾಂಕಿಂಗ್ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಸ್ಟಾರ್‌ಸಿಟಿ ಬೌಲಿಂಗ್ ಸೆಂಟರ್‌ನಲ್ಲಿ ನಡೆದ ಸ್ಪರ್ಧೆಯ ಫೈನಲ್‌ನಲ್ಲಿ ಭೀಮ್ ಮಂಡಲ್ 185-150 ಪಿನ್‌ಗಳಿಂದ ಸೆಂಟ್ರಲ್ ಮ್ಯಾನೇಜ್‌ಮೆಂಟ್ ಸ್ಕೂಲ್‌ನ ನಿಶಿತ್ ಖೇಡಿಯಾ ಅವರನ್ನು ಸೋಲಿಸಿದರು.

ಇದಕ್ಕೆ ಮೊದಲು ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಸೆಂಟ್ರಲ್ ಮ್ಯಾನೇಜ್‌ಮೆಂಟ್‌ಸ್ಕೂಲ್‌ನ ನಿಶಿತ್ ಖೇಡಿಯಾ 170-123ರಲ್ಲಿ ವೆಂಕಟ್ ಪಬ್ಲಿಕ್ ಸ್ಕೂಲ್‌ನ ವತ್ಸಲ್ ಮೇಲೂ, ಭೀಮ್ 150-131ರಲ್ಲಿ ಜೆಐಆರ್‌ಎಸ್‌ನ ಸಚಿತ್ ಗಾರ್ಗ್ ಎದುರು ಗೆಲುವು ಪಡೆದಿದ್ದರು.